ಗುಲ್ಬರ್ಗಾ ಜಿಲ್ಲೆಯ ಗ್ರಾಮಾಂತರ ಪ್ರದೇಶದ ವೈದ್ಯಕೀಯ ಕೇಂದ್ರಗಳ ಬಗ್ಗೆ

312 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿರುವ ವಿವಿಧ ಸ್ವರೂಪದ ವೈದ್ಯಕೀಯ ಕೇಂದ್ರಗಳು ಎಷ್ಟು? ಹಾಗೂ ಮಂಜೂರಾದ ಹುದ್ದೆಗಳು ಮತ್ತು ಈಗ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು?*

ಆ) *ಈ ಕೇಂದ್ರಗಳಿಗೆ ಎಷ್ಟು ಔಷಧಿಯನ್ನು ಪ್ರತಿ ವರ್ಷ ಪೂರೈಸಲಾಗುತ್ತಿದೆ, ಹಾಗೂ ಈ ವರ್ಷದ ಫೆಬ್ರವರಿ ಅಂತ್ಯದವರಿಗೆ ಪೂರೈಕೆಯಾದ ಔಷಧಿಯ ಮೊತ್ತವೆಷ್ಟು?*

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು):

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯಕೀಯ ಕೇಂದ್ರಗಳು

ಅ)	ಪ್ರಾ. ಆ. ಘಟಕ	24
ಆ)	ಪ್ರಾ. ಆ. ಕೇಂದ್ರ	75
ಇ)	ತಾಲ್ಲೂಕು ಆಸ್ಪತ್ರೆ	
	ಸ. ಆ. ಕೇಂದ್ರ	17
		116
ಈ ಜಿಲ್ಲೆಗೆ ಮಂಜೂರಾಗಿರುವ ಹುದ್ದೆಗಳು		2361
ಕೆಲಸ ಮಾಡುತ್ತಿರುವುದು		1970

ಪ್ರತಿವರ್ಷ ಸರಬರಾಜು ಮಾಡುವ ಔಷಧಿಗಳ ಮೌಲ್ಯ ಹೀಗಿದೆ.

ಪ್ರಾ.ಆ.ಘಟಕ	ರೂ.	20,000
ಪ್ರಾ.ಆ.ಘಟಕ	ರೂ.	30,000
ಸ.ಆರೋಗ್ಯ ಕೇಂದ್ರ	ರೂ.	2,00,000
ಸಾರ್ವಜನಿಕ ಆಸ್ಪತ್ರೆ	ರೂ.	3,00.000

1995ರ ಫೆಬ್ರವರಿ ಅಂತ್ಯದವರೆಗೆ ಗುಲ್ಬರ್ಗಾ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಸರ್ಕಾರಿ ಔಷಧಿ ಮಳಿಗೆಯಿಂದ ರೂ. 66,32,422-00 ರ ಮೌಲ್ಯದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಇದಲ್ಲದೆ, ಶೇಕಡ 40 ರ ಅನುದಾನದ ಔಷಧಿಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯ್ತಿಯ ವತಿಯಿಂದ ಸರಬರಾಜು ಮಾಡಲಾಗುತ್ತದೆ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು.

317- ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಮತ್ತು ಗುರ್ಗ ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?*

ಆ) *ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಉಳಿದ ಶಾಲೆಗಳಿಗೆ ಸ್ವಂತ ಕಟ್ಟಡ ಕಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*